# ಶ್ರೀವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರು



ಮಾತಾಪಿತರು – ಶ್ರೀ ಕುಪ್ಪಣ್ಣತಂತ್ರಿಗಳು ಮತ್ತು ಶ್ರೀಮತಿ ರಾಧಮ್ಮ

ಜನ್ಮಸ್ಥಳ – ಎರ್ಮಾಳು (ಉಡುಪಿಯಿಂದ ದಕ್ಷಿಣಕ್ಕೆ ೧೩ಮೈಲಿ)

ಜನ್ಮ ವರ್ಷ – 1913

ಜನ್ಮನಾಮ – ನಾರಾಯಣ

ಪ್ರಾಥಮಿಕ ವಿದ್ಯಾಭ್ಯಾಸ – ತಂದೆಗಳಿಂದ

---

ಉಪನಯನ – ೮ನೇ ವಯಸ್ಸಿನಲ್ಲಿ ಕ್ರೋಧನ ನಾಮ ಸಂವತ್ಸರ (೫.೧೧.೧೯೨೫)



## ಮಂತ್ರೋಪದೇಶ ನೀಡಿದ ಶತಾಯುಷಿ ಶ್ರೀಸುಧೀಂದ್ರತೀರ್ಥರು

---

## ಆಶ್ರಮ ನೀಡಿದ ಗುರುಗಳು - ಶ್ರೀವಿಬುಧಪ್ರಿಯತೀರ್ಥರು



## ಸನ್ಯಾಸಸ್ವೀಕಾರ - ೧೯೨೫ (೧೨ನೇ ವಯಸ್ಸಿನಲ್ಲಿ)

---

ಹೆಚ್ಚಿನ ವಿದ್ಯಾಭ್ಯಾಸ –

೧. ಆಶ್ರಮಗುರುಗಳಾದ ಶ್ರೀವಿಬುಧಪ್ರಿಯತೀರ್ಥರಿಂದ ಮೂರುವರ್ಷಕಾಲ
೨. ಶ್ರೀವಾಸುದೇವಾಚಾರ್ಯರಲ್ಲಿ – ದಶಪ್ರಕರಣಗಳು, ದಶೋಪನಿಷತ್ತು, ಮತ್ತು ತತ್ತ್ವಪ್ರಕಾಶಿಕಾ
೩. ಶ್ರೀಸತ್ಯಧ್ಯಾನರಲ್ಲಿ – ಶ್ರೀಮನ್ನ್ಯಾಯಸುಧಾ, ತತ್ತ್ವಪ್ರಕಾಶಿಕಾ, ನ್ಯಾಯಮೃತ, ತರ್ಕತಾಂಡವ,
೪. ಚಂದ್ರಿಕಾ. ತರ್ಕತಾಂಡವ, ಚಂದ್ರಿಕ.



**ಗುರುಗಳಿಂದಲೇ ಪ್ರಶಸ್ತಿ** – ವಿದ್ಯಾಭ್ಯಾಸವನ್ನು ಪೂರೈಸಿ ಹೊರಟ ಸಂದರ್ಭದಲ್ಲಿ ವಿದ್ಯಾಮಾನ್ಯರನ್ನು ಬಿಗಿದಪ್ಪಿ ಶ್ರೀಸತ್ಯಧ್ಯಾನಶ್ರೀಪಾದತೀರ್ಥರು ಕೊಟ್ಟ ಹೊಗಳಿಕೆ "ನೀವು ವಿದ್ಯಾಭಂಡಾರ ಆಗಿರುವಿರಿ".

**ಸುಧಾಮಂಗಳ** – ಮೊದಲನೇ ಸುಧಾಮಂಗಳ ತಿರುಪತಿಯಲ್ಲಿ ಸತ್ಯಧ್ಯಾನರ ಸನ್ನಿಧಾನದಲ್ಲಿ, ಎರಡನೇಯದನ್ನು ಶ್ರೀರಂಗದಲ್ಲಿ ತಮ್ಮ ಚಾತುರ್ಮಾಸ್ಯ ಸಂದರ್ಭದಲ್ಲಿ.

## ಸನ್ಯಾಸಿ ಶಿಷ್ಯರು –



ಶ್ರೀ ಪೇಜಾವರಮಠದ ವಿಶ್ವೇಶತೀರ್ಥರು,
ಶ್ರೀ ಅದಮಾರುಮಠದ ಶ್ರೀವಿಶ್ವಪ್ರಿಯತೀರ್ಥರು
ಶ್ರೀ ಪುತ್ತಿಗೆಮಠದ ಶ್ರೀಸುಗುಣೇಂದ್ರತೀರ್ಥರು
ಶ್ರೀ ಫಲಿಮಾರುಮಠದ ಶ್ರೀವಿದ್ಯಾಧೀಶತೀರ್ಥರು
ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯೇಶತೀರ್ಥರು

ಗೃಹಸ್ಥ ಶಿಷ್ಯರು –
ಶ್ರೀಕೊರ್ಲಹಳ್ಳಿ ರಾಘವೇಂದ್ರಾಚಾರ್ಯರು
ಶ್ರೀ ಜಕ್ಕಲಿ ಬೋಧರಾಯಾಚಾರ್ಯರು
ಶ್ರೀ ಪಿ.ಕೆ ಹರಿದಾಸಾಚಾರ್ಯರು
ಶ್ರೀ ಬಿ. ವಾದಿರಾಜಾಚಾರ್ಯರು
ಶ್ರೀ ಲಕ್ಷ್ಮೀನಾರಾಯಣ ಕೊಡಂಚರು

<u>ಗಮನಿಸಿ</u> – ಈ ಐದೂಜನ ಸನ್ಯಾಸಿ ಶಿಷ್ಯರಿಗೆ ಹಲವಾರು ಸನ್ಯಾಸಿ ಶಿಷ್ಯರೂ, ಗೃಹಸ್ಥ ಶಿಷ್ಯರೂ, ಇದ್ದಾರೆ. ಇಂದಿಗೂ ಶ್ರೀವಿದ್ಯಾಮಾನ್ಯರ ಶಿಷ್ಯ–ಪ್ರಶಿಷ್ಯರ ಸಂತತಿ ಬೆಳೆಯುತ್ತಿದೆ.

**ವಾಗ್ಯುದ್ಧದಲ್ಲಿ ವಿಜಯ** –

1. 1940ನೇ ಇಸವಿಯಲ್ಲಿ ಶ್ರೀತಾತಾಸುಬ್ರಾಯಶಾಸ್ತ್ರಿಗಳ ಜೊತೆ ವಾದ ನಡೆಸಿ ವಿಜಯಪ್ರದರಾದರು.
2. ಕಾಂಚೀಪುರದಲ್ಲಿ ಕುಂಭಕೋಣದ ಕಾಮಕೋಟಿ ಶಂಕರಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ ಅಧ್ವೈತ ಸಭೆಯಲ್ಲಿ ಮಹಾಮಹೋಪಾಧ್ಯಾಯ ಅನಂತಕೃಷ್ಣಶಾಸ್ತ್ರಿ, ಶ್ರೀಸುಬ್ರಹ್ಮಣ್ಯಶಾಸ್ತ್ರಿ, ಸುಂದರಶಾಸ್ತ್ರಿ ಮುಂತಾದವರ ಜೊತೆ ವಾಗ್ವಾದ – ಜಯ
3. ಕಾಶಿಯಲ್ಲಿ 1958ನೇ ಇಸವಿಯಲ್ಲಿ ಮಹಾಮಹೋಪಾಧ್ಯಾಯ ಗಿರಿಧರಶರ್ಮಾ ಚತುರ್ವೇದಿ ಇವರ ಅಧ್ಯಕ್ಷತೆಯಲ್ಲಿ ನಡೆದ ಅಧ್ವೈತ ಸಭೆಯಲ್ಲಿ ಶ್ರೀಪಾದರ ವೈಶಿಷ್ಟ್ಯ ಮೆಚ್ಚಿ ಗೌರವಾರ್ಪಣೆ.
4. ಶ್ರೀ ಅನಂತಕೃಷ್ಣಶಾಸ್ತ್ರಿಗಳು ಬರೆದ "ಅಧ್ವೈತಸುಧಾ" ಎಂಬ ಶ್ರೀಮನ್ನ್ಯಾಯಸುಧಾ ಖಂಡನಾಗ್ರಂಥಕ್ಕೆ ಖಂಡನರೂಪವಾಗಿ "ಅಧ್ವೈತ ತತ್ವಸುಧಾ ಸಮೀಕ್ಷಾ" ಎಂಬ ಗ್ರಂಥ ರಚನೆ.
5. ದಿಲ್ಲಿಯಲ್ಲಿ ಧ್ವೈತಾಧ್ವೈತ ಚರ್ಚೆಯ ಸಭೆಯಲ್ಲಿ ಶ್ರೀರಾಮಚಂದ್ರ ಶಾಸ್ತ್ರಿ ಪಡಂಗ ಮೊದಲಾದವರ ವಿರುದ್ಧ ವಾಕ್ಯಾರ್ಥ – ವಿಜಯ
6. ೧೯೮೯ರಲ್ಲಿ ಶ್ರೀವಿದ್ಯಾಮಾನ್ಯತೀರ್ಥರು ಅದ್ವೈತ ಮತದ ಮೇಲೆ "ಅಚ್ಛೇದ್ಯ ಅಭೇದ್ಯ ಪ್ರಶ್ನೆಗಳು" ಎಂಬ ಶೀರ್ಷಿಕೆಯಲ್ಲಿ ಹತ್ತು ಪ್ರಶ್ನೆಗಳನ್ನು ಬರೆದರು. ಈ ಪ್ರಶ್ನೆಗಳಿಗೆ ಅದ್ವೈತಿಗಳಿಗೆ ಉತ್ತರಿಸಲು ಹೇಳಿ ತಾವೇ ಖುದ್ದಾಗಿ ಶೃಂಗೇರಿಗೆ ಹೊರಟರು. ಅಲ್ಲಿ ಅವರಿಂದ ಪ್ರಶ್ನೆಗಳಿಗೆ ಉತ್ತರಿಸಲಾಗಲಿಲ್ಲ.
7. ದಿಲ್ಲಿಯಲ್ಲಿ ಅಷ್ಟಗ್ರಹಯೋಗದ ದುಷ್ಪರಿಣಾಮದ ಪರಿಹಾರಕ್ಕಾಗಿ ಶ್ರೀಪಾದರ ನೇತೃತ್ವದಲ್ಲಿ 12ದಿನಗಳ "ವಿಶ್ವಕಲ್ಯಾಣಯಾಗ". ಇದರಲ್ಲಿ 700ಕ್ಕೂ ಹೆಚ್ಚು ಜನ ಋತ್ವಿಜರು ಭಾಗವಹಿಸಿದ್ದರು.

## ಶ್ರೀಗಳವರ ತಾರುಣ್ಯದ ಭಾವಚಿತ್ರಗಳು :-





**ಮೊದಲ ಬದರೀಯಾತ್ರೆ – ಕಾಶಿಯಿಂದ ಹರಿದ್ವಾರಕ್ಕೆ ತೆರಳಿದ ಶ್ರೀಪಾದರು ಅಲ್ಲಿಂದ ೧೫೦ ಮೈಲು ಕಾಲುನಡಿಗೆಯಿಂದ ಭಾಷ್ಯಪಾರಾಯಣ ಮಾಡುತ್ತಾ ಬದರಿ ತಲುಪಿದರು.**

### ಮಧ್ವಶಾಸ್ತ್ರ ಕಲಿಯುವ ವಿದ್ಯಾರ್ಥಿಗಳಿಗಾಗಿ ಅವರ ಸಾಧನೆಗೆ ಸಹಾಯಹಸ್ತ –

೧. ವಿದ್ಯಾರ್ಥಿ ಪರೀಕ್ಷೆ – ಯಥೇಷ್ಟಸಂಭಾವನೆ, ಶಾಸ್ತ್ರಪಾಠ–ಪ್ರವಚನಗಳಲ್ಲಿ ನಿರತರಾಗಿರುವ ವಿದ್ಯಾರ್ಥಿಗಳಿಗೆ ಉತ್ತೇಜನ.

೨. ಚರ್ಚಾಗೋಷ್ಠಿಗಳು

೩. ಗ್ರಂಥದಾನ, ಪಾಠಗಳ ವ್ಯವಸ್ಥೆ,

೪. ಗ್ರಂಥಪ್ರಕಾಶನ – ಶ್ರೀಪಾದರೇ ಸ್ವತ: ಬರೆದಿರುವ "ದ್ವೈತಸ್ಯ ಅಪೂರ್ವತಾ", ಗಾಯತ್ರೀ ಗಾಂಭೀರ್ಯ, ತತ್ತ್ವಸಂಜ್ಞಾನ, ತತ್ತ್ವವಿವೇಕ, ಉಪಾಧಿಖಂಡನ, ಮಾಯಾವಾದ ಖಂಡನ ಮೊದಲಾದ ಗ್ರಂಥಗಳ ಕನ್ನಡಾನುವಾದದ ಪುಸ್ತಕಗಳು, ಶ್ರೀಮದಾಚಾರ್ಯರ ದಶಪ್ರಕರಣಗಳನ್ನು, ಶ್ರೀಮಟ್ಟೀಕಾಚಾರ್ಯರ ಟೀಕೆ ಹಾಗೂ ಅನೇಕ ವ್ಯಾಖ್ಯಾನಗಳೊಂದಿಗೆ ಲೇಖನ

ಕಾಷ್ಠಮೌನವ್ರತ – 1961ರಲ್ಲಿ ಬದರೀಕ್ಷೇತ್ರದಲ್ಲಿ. ಶ್ರೀಗಳ ಜೊತೆಯಲ್ಲಿ ಮೂರು ಮಂದಿ ಮಾತ್ರ ಸಹಾಯಕರು. ಉಳಿದವರೆಲ್ಲ ಹರಿದ್ವಾರಕ್ಕೆ ಮರಳಿದರು. ಛತ್ರವೊಂದರಲ್ಲಿ ಶ್ರೀಪಾದರ ವಾಸ. ಬೆಳಗಿನ ಜಾವ ನಾಲ್ಕು ಗಂಟೆಗೆ ಏಳುವುದು, ಬಾಹ್ಯ ಶೌಚಗಳನ್ನು ಪೂರೈಸುತ್ತಿದ್ದರು. ಭೋರ್ಗರೆವ ಅಲಕನಂದೆಯಲ್ಲಿ ಅವಗಾಹನ ಸ್ನಾನ. ಅನಂತರ ಗೀತಾಭಾಷ್ಯ, ಬ್ರಹ್ಮಸೂತ್ರಪಾಠ, ಮಧ್ಯಾಹ್ನ ಅಲಕನಂದೆಯಲ್ಲಿ ಸ್ನಾನ.

**(SOURCE – KORLAHALLI VENKATESHACHAR)**